# ಹಾಡಿನಿಂದೆಚ್ಚರಿಸು !

ನಿಜವನರಿತವರೆಲ್ಲೊ ಕೆಲವರು; ನಗುವರುಳಿದವರೆಲ್ಲರೂ
ನಿನ್ನ ಕಂಡರೆ, ಹೇ ಮಹಾತ್ಮನೆ! ಕುರುಡರೇನನು ಬಲ್ಲರು?
ಗಣಿಸದವರನು ಹೋಗು, ಮುಕ್ತನೆ, ನೀನು ಊರಿಂದೂರಿಗೆ
ಸೊಗವ ಬಯಸದೆ, ಅಳಲಿಗಳುಕದೆ! ಕತ್ತಲಲಿ ಸಂಚಾರಿಗೆ

ನಿನ್ನ ಬೆಳಕನು ನೀಡಲೈ ; — ಸಂ
ಸಾರ ಮಾಯೆಯ ದೂಡಲೈ!

ಇಂತು ದಿನದಿನ ಕರ್ಮಶಕ್ತಿಯು ಮುಗಿವವರೆಗೂ ಸಾಗೆಲೈ !
ನಾನು ನೀನುಗಳಳಿದು ಆತ್ಮದೊಳಿಳಿದು ಕಡೆಯೊಳು ಹೋಗಲೈ !
ಏಳು, ಮೇಲೇಳೇಳು ಸಾಧುವೆ, ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ತತ್ತ್ವಮಸಿ ಎಂದರಿತು ಹಾಡೈ , ಧೀರ ಸಂನ್ಯಾಸಿ —

ಓಂ ! ತತ್! ಸತ್ ! ಓಂ !

— ಸ್ವಾಮಿ ವಿವೇಕಾನಂದ, 'ಸಂನ್ಯಾಸಿ ಗೀತೆ'
*(ಅನು: ಕುವೆಂಪು)*

# ಶರಣಾಗತಿ

ಶರಣಾಗು ಶರಣಾಗು ಶರಣಾಗು ಮನವೇ
ಶ್ರೀಗುರು ಚರಣ ಸರೋಜಕೆ ಮಣಿದು

ರಾಮಕೃಷ್ಣ ಗುರು ಕೃಪೆ ನಿನಗಾದರೆ
ಹರಿವುದು ಭವ ಭಯ ಚಿಂತಾರುಜಿನ;
ಶ್ರೀಗುರು ನಾಮದ ನೌಕೆಯು ದೊರೆತರೆ
ಭವಸಾಗರ ಯಾನವೆ ಮೋದಕರ

ಎಲ್ಲ ಧರ್ಮಗಳ ತಿರುಳನು ಸಾರುವ
ನೊಂದ ಜೀವರಿಗೆ ಭರವಸೆಯೀಯುವ
ರಾಮಕೃಷ್ಣ ಸಂದೇಶ ಗೀತೆಯ
ಸಾಗರದಲೆಗಳು ಹಾಡುತಿವೆ

ಭವ್ಯ ಹಿಮಾಲಯ ಪರ್ವತರಾಜಿಯು
ಮುಳುಗಿರೆ ಧ್ಯಾನ ಸಮಾಧಿಯಲಿ
ರಾಮಕೃಷ್ಣ ಜಯ ರಾಮಕೃಷ್ಣ ಜಯ
ಎಂಬೀ ನಿನದವು ಕೇಳುತಿದೆ

— 'ಜಯದೇವ' (ಪ್ರೊ . ಕೆ.ಬಿ. ಪ್ರಭುಪ್ರಸಾದ್)